Regd No M 1299 34 th Year ತಾ: 29—1—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರಬೋಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸ್ಥಾಪಕರು- ಆರಮನೆ ಸಿರಸ್ತೇದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಗೋರಕ್ಷಣೆ
[ತಿಂಗಳಿಗೊಂದಾವರ್ತ]
ವಾರ್ಷಿಕಚಂದಾ ಅಂಚೆವೆಚ್ಚಸೇರಿ 0 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

— ದಿವ್ಯವಾಣಿ —

ನಿನ್ನ ಬಾಯಿಗೆ ಲಗಾಮು ಕಟ್ಟಿ ಅದನ್ನು ನಿನ್ನ ವಶದಲ್ಲಿಟ್ಟುಕೋ.

ಕಮ್ಯೂನಿಸ್ಟ್ ಸೈನ್ಯವು ಯುರೋಪ್ ಪದಲ್ಲಿ ತಪ್ಪಿಸಗದ ಕೂಡಲೇ ಮಾಸ್ಕೊದ ವೇಲೆ ಆಟಂ ಬಾಂಬು ಹಾಕುವೆವು ಎಂದು ಅಮೆರಿಕೆಯು ರಷಿಯಾಕ್ಕೆ ಎಚ್ಚರಿಕೆ ಕೊಡಬೇಕ. ಎಂದು ನೊಬೆಲ್ ಸಾರಿತೋಷಕ ಪಡೆದ ಡಾ|| ಹಾರೊಲ್ಡ್ ಕ್ಯುರೆಯವರು ನ್ಯೂಯಾರ್ಕಿನಲ್ಲಿ ತಿಳಿಸಿರುವರು.

ಂ ಂ

ಅಮೇರಿಕವು ಇಡೀ ವಿಶ್ವದ ಸಮುದ್ರ ವಾಯು ಮಂಡಳಗಳ ವೇಲೆ ತನ್ನ ನಿಯಂತ್ರಣವನ್ನಿಟ್ಟುಕೊಳ್ಳಬೇಕೆಂದು ಸೆನೇಟರ್ ಬಟ್ಲರ್ ಪಾಪ್ಪರು ವಾಷಿಂಗ್ಟನ್ನಿನಲ್ಲಿ ಆಕಾಶವಾಣಿ ಚರ್ಚೆಯಲ್ಲಿ ತಿಳಿಸಿದರು.

ಂ ಂ

ಭಾವನಗಂದ ಪ್ರಥಮ ವರ್ಗದ ನ್ಯಾಯಾಧೀಶರು ಸೌರಾಷ್ಟ್ರ ದ್ವಿಪತ್ನಿ ಪ್ರತಿಬಂಧಕಾಜ್ಞೆಯು ಭಾರತ ರಾಜ್ಯಘಟನೆಯ 15 ನೆ ಕಲಮನ್ನು ಭಂಗಿಸುವುದರಿಂದ ಅಕ್ರಮವಾಗಿರುವುದೆಂದು ಒಂದು ಪಟ್ಟಿಯಲ್ಲಿ ತೀರ್ಪಿತ್ತಿರುವುದಾಗಿ ರಾಜಕೋಟೆ ವಾರ್ತೆ.

ವೃತ್ತಾಂತ ಸಂಗ್ರಹ

ನಿನ್ನೆಯಿಂದ ಬೊಂಬಾಯಿನಲ್ಲಿ ರೇಷನ್ ಕಾರ್ಡುಗಳ ಮೇಲೆ ಬಟ್ಟೆ ಹಂಚುವ ಏರ್ಪಾಟು ಮಾಡಲಾಗಿದೆ

ಂ ಂ

ಬಿಹಾರದ ಗಡಿಯಲ್ಲಿರುವ ವೀರಭೂಮಿ ಜಿಲ್ಲೆಯ ಗ್ರಾಮವೊಂದಲ್ಲಿ ಸೇರಿದ ಸುಮಾರು ಐನೂರು ಕಳ್ಳಸಾಗಾಟಗಾರರು ಹಾಗೂ ಅವರ ಸಹಾಯಕರ ಜನಮ್ಮ ಸಭೆಯನ್ನು ಚದುರಿಸಲು ಪೋಲಿಸರು ಕಳೆದ ಶನಿವಾರ 11 ಗುಂಡು ಹಾರಿಸಿದರು ಒಬ್ಬನು ಮರಣ ಹೊಂದಿದ್ದು ಬೇರೆ ಕೆಲವರು ಗಾಯಗೊಂಡಿದ್ದಾರೆ ನರು. ಕಳ್ಳ ಸಾಗಾಟಗಾರರು ಪೋಲಿಸರ ವೇಲೆ ಏರಿ ಬಂದದ್ದರಿಂದ ಪೋಲಿಸರು ಗೋಳಿಬಾರ್ ಮಾಡಿದರೆಂದು ಹೇಳಲಾಗುತ್ತಿದೆಯೆಂದು ಕಲ್ಕತ್ತಾ ವಂದಿ

ಂ ಂ

ನಾಳೆ ಬೆಳಿಗ್ಗೆ ಮೈಸೂರು ಪತ್ರಿಕೋದ್ಯಮಿ ಸಾಧದಲ್ಲಿ ಧ್ವಜಾರೋಹಣ ನೆರವೇರುವದು.

ಂ ಂ

ಪಂ|| ನೆಹರು ನಿನ್ನೆ ದೆಹಲಿ ರೇಡಿಯೋ ಕೇಂದ್ರದಿಂದ ಭಾಷಣ ಮಾಡುತ್ತಾ ನಮ್ಮ ರಾಜ್ಯಗಳು ಶಾಂತಿಯು ಕಾವಲುಗಾರನಂತಿವೆ — ಎಂದರು.

ಪಾಕೀಸ್ತಾನ ಪುನಹ ಭಾರತವನ್ನು ಪ್ರತಿಭಟಿಸಿದೆ

ನಿನ್ನೆ ದಿನಸ ಮಾಜಿ ಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರ ವಸಯಲ್ಲಿ ಅವಿಶ್ವಾಸಕ್ಕೆ ಸಹಿ ಹಾಕಿದವರ ಸಭೆ ಸೇರಿ ಶಾಸನ ಸಭೆ ಚರ್ಚಾ ಕಾಲದಲ್ಲಿ ತೆಸ್ಗಿಯುವ ತೀರ್ಮಾನಕ್ಕೆ ಬಂದರೆಂದು ಬೆಂಗಳೂರಿನಿಂದ ಗೊತ್ತಾಗಿದೆ.

ಂ ಂ

ಸಚಿವ ಮಂಡಳಿಗೆ ರಾಜಿನಾಮೆಗಳ ನೇವ ಕಾರ್ಯಕ್ರಮ ವಾಗ ಚುನಾವಣೆ ಜರುಗಬೇಕೆಂದು ನೂರು ಮುಂದಿರಾಜಿನಾಮೆ ನೇ ಪಾರ್ಲಿಮೆಂಟಿಗೆ ಮನವಿ ಮಾಡಿರುವದಾಗಿ ಪತ್ರಿಕೆಗಳ ವಾರ್ತೆ.

ಂ ಂ

ಕಂಪು ಚೀನವನ್ನು ಆಕ್ರಮಣಕಾರಿ ದೇಶವೆಂದು ಘೋಷಿಸಲು ಫ್ರಾನ್ಸ್ ಸಿದ್ಧವಿರುವದಾಗಿ ಪೇರಿಸ್ ವಾರ್ತೆ.

ಂ ಂ

ದಾವಣಗೆರೆಯ ನೇತಾಜಿ ಮತ್ತು ಪ್ರಭಾತ ದಿನಪತ್ರಿಕೆಗಳ ಸಂಪಾದಕರಾದ ಶ್ರೀಗಳಾದ ವೇದವ್ಯಾಸಾರ್ಯ ವತ್ತು ಮುರಿಗಪ್ಪಯ್ಯ ಮತ್ತು ಆ ಪತ್ರಿಕೆಗಳಿಗೆ ಸಂಬಂಧಿಸಿದ ರೇವಣ್ಣಸಿದ್ಧಯ್ಯ, ಮತ್ತು ಕೊಟ್ಟೂರು ಸಿದ್ದಲಿಂಗಸ್ವ. 6 ಮಂದಿ ಕೆಲಸಗಾರರನ್ನು ಕೂಡ ಪೋಲೀಸರು ದಸ್ತಗಿರಿ ಮಾಡಿರುವದಾಗಿ ಚಿತ್ರದುರ್ಗ ವರದಿ ಮೈಸೂರು ಸೀಮೆ ಒಳ ಎಲವಟ್ಟಿ ಎಂಬ ಗ್ರಾಮದಲ್ಲಿ ಸಶಸ್ತ್ರ ದರೋಡೆ ನಡೆದು ರೂ 20 ಸಾವಿರ ಅಪಹರಣ ಮತ್ತು 2 ಕೊಲೆ ಸಂಬಂಧದಲ್ಲಿ ಇಪ್ಪತ್ತೆರಡಸ್ತಗಿರಿ

ಂ ಂ

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ವಿಧಾನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಮಿತವ್ಯಯ ವೃಷ್ಟಿಯಿಂದ ರೂ. 21 ಲಕ್ಷದ ಸಿಬ್ಬಂದಿ ಕಡಿತ ಮಾಡಲಾಗುವದೆಂದರು. ಮತ್ತೊಂದು ಪ್ರಶ್ನೆಗೆ ಉತ್ತರವೀಯುತ್ತಾ ಆಹಾರ ಧಾನ್ಯ ಬೆಲೆ ಹೆಚ್ಚಿಸಿದ್ದರಿಂದ ಸಮಾರು ರೂ 40 ಲಕ್ಷದಷ್ಟು ನಷ್ಟ ಕಡಿಮೆಯಾಗುವದೆಂದರು.

ತಿರುನೆಲ್ವೇಲಿಯ ಕೆಲವು ಅಕ್ಕಿ ಗಿರಣಿಗಳಲ್ಲಿ ಪಡತಂ ಅಧಿಕಾರಿಗಳು ಮೊನ್ನೆ ಅಕ್ಕಿ ವಶಪಡಿಸಿಕೊಂಡರು.

ಂ ಂ

ಮುಂದಿನ ಮಾಹೆ 2 ನೇ ವಾರದಲ್ಲಿ ಡಾ|| ಮೋದಿಯವರು ಕಣ್ಣು ಚಿಕಿತ್ಸಾ ಶಿಬಿರ ಪ್ರಾರಂಭಿಸಲಿದ್ದಾರೆ.

ಂ ಂ

ಭಾರತ 20 ಲಕ್ಷ ಟನ್ ಆಹಾರ ಕೂಡಲೇ ದೊರಕಿಸಿ ಎಂದು ಅಮೆರಿಕೆಯನ್ನು ಕೇಳಿರುವ ಬಗ್ಗೆ ಹತ್ತು ದಿನಸಗಳಲ್ಲಿ ನಿರ್ಧಾರವಾಗಲಿದೆಯೆಂದು ವಾಷಿಂಗ್ಟನ್ನಿನ ವಾರ್ತೆ

ಂ ಂ

ನಾಳೆಯಿಂದ ಯು. ಪಿ. ಜಮೀಂದಾರಿ ರದ್ದು ಶಾಸನ ಜಾರಿಗೆ ಬರುವದು.

ಂ

ಈ ರಾತ್ರಿ ರಾಷ್ಟ್ರಾಧಿಪತಿ ರಾಜೇಂದ್ರಬಾಬು ದಿಲ್ಲಿ ರೇಡಿಯೋನಿಂದ ರಾತ್ರಿ 8 ವರೆ ಗಂಟೆಗೆ ಭಾಷಣ ಮಾಡುವರು.

ಂ ಂ

ಯಾಟುಂಗನಲ್ಲಿರುವ ಟಿಬೆಟ್ ಸರ್ಕಾರ ಪತ್ರಿಕೆಯವರು ಹಾಗೂ ಭಾವಚಿತ್ರ ಗಾರರ ಪ್ರವೇಶ ನಿರ್ಬಂಧವನ್ನು ಪುನರ್ ವಿಮರ್ಶಿಸಿರುವದಾಗಿ ಭಾರತ ಸರ್ಕಾರಕ್ಕೆ ತಿಳಿಸಿದೆ

ಂ ಂ

ಕೊರಿಯಾ ಪರಮಾಣು ಸಮಾಸ್ಯೆ ಬಗ್ಗೆ ವಿಷ್ಯ ನುತ್ತಮ ವಿಧ ಪ್ರಾಬ್ಯಗಳು ಮುಂದೆ ಬಂದಿರುವದನ್ನು ಪ್ರಧಾನಿ ಚಟ್ಲಿ ಸ್ವಾಗತಿಸಿರುವದಾಗಿ ಲಂಡನ್ ವಾರ್ತೆ.

ಂ ಂ

ಭಾರತಕ್ಕೆ ಪುನಃ ಪಾಕಿಸ್ತಾನ ಪ್ರತಿಭಟನೆ ಕಳಿಸಿರುವದಾಗಿ ದೆಹಲಿಯಿಂದ ತಿಳಿದುಬಂದಿದೆ ದೆಹಲಿಯಲ್ಲಿ ನಡೆದ ಫರ್ಕೂಕ್ ಬಿಗಾರ್ದಲ್ಲಿ ಭಾಗವಹಿಸಿದ್ದವರು ಮಾಡತ್ತಿರುವ ಪಾಕ್ ವಿರೋಧಿ ಪ್ರಚಾರಗಳಿಗೆ ಭಾರತ ಪತ್ರಿಕೆಗಳು, ರೇಡಿಯೋ ಪ್ರಧಾನತೆ ಕೊಡುತ್ತಿರುವ ರಿಂದಾಗಿ ಪಾಕ್ ರಾಜ್ಯ ಅಕ್ಷೇಪಣೆ

ಮೈಸೂರಿನಲ್ಲಿ ಕುಳಿರ್ ಗಾಳಿ

" ಪರಿವರ್ತನೆಯೇ ಪ್ರಗತಿಯು ಬಸಿರು " — ಕಾರ್ಲೈಲ್

ಮೈಸೂರಿನ ರಾಜಕೀಯ ಕ್ಷೇತ್ರದಲ್ಲಿ ಹೊಸ ಗಾಳಿಯೊಂದು ಬೀಸುತ್ತಿದೆ ಬದಲಾವಣೆಯು ಅವಶ್ಯಕತೆಯು ಪಲ್ಲವಿಯನ್ನು ಈ ಗಾಳಿಯು ಧ್ವನಿಸುವಂತಿದೆ

ಶ್ರೀ ರೆಡ್ಡಿಯವರ ಮಂತ್ರಿಮಂಡಲವು ಅಗ್ನಿ ಪರೀಕ್ಷೆಗೆ ಒಳಗಾಯಿತು ಬಹಳ ಕಷ್ಟದಿಂದ ರೆಡ್ಡಿಯವರ ಮಂತ್ರಿಮಂಡಲವು ಉಳಿದುಕೊಂಡಿತು ಕೇವಲ ನಾಲ್ಕು ಮತಗಳಿಂದ ರೆಡ್ಡಿಯವರ ವೇಲೆ ಬಂದಿದ್ದ ಅವಿಶ್ವಾಸದ ಗೊತ್ತುವಳಿ ಬಿದ್ದುಹೋಗಿದೆ. ಈ ನಾಲ್ಕು ಮತಗಳಲ್ಲಿ ಎರಡು ಮತಗಳು ಶಟ್ಟಿಸ್ವಾಮಿಗಿದ್ದರಿಂದ ಅವು ರೆಡ್ಡಿಯವರಲ್ಲಿ ವಿಶ್ವಾಸವನ್ನಾಗಲಿ, ಅವಿಶ್ವಾಸವನ್ನಾಗಲಿ ಸೂಚಿಸಿದಂತಾಗಿಲ್ಲ ಇನ್ನುಳಿದ ಒಂದೆರಡು ಮತಗಳಿಂದ ಮಂತ್ರಿಮಂಡಲಕ್ಕೆ ಜೀವದಾನವನ್ನು ಗಳಿಸಿಕೊಂಡಿರುವದಕ್ಕೆ ಲೋಕಸತ್ತಾತ್ಮಕ ಆಡಳಿತದಲ್ಲಿ ಅಷ್ಟಾಗಿ ಮೆಚ್ಚಿಕೆ ಇಲ್ಲವೆಂದೇ ಹೇಳಬೇಕು ರೆಡ್ಡಿಯವರು ವಿಶೇಷಬಹುಮತವನ್ನು ದೊರಕಿಸಿಕೊಂಡೇ ತಮ್ಮ ಮಂತ್ರಿಮಂಡಲವನ್ನು ಉಳಿಸಿಕೊಳ್ಳುವದು ಶ್ರೇಯಸ್ಕರವಾಗಿದ್ದಿತು ಇದು ಸಾಧ್ಯವಿಲ್ಲದಿರುವಾಗ ಕಾಂಗ್ರೆಸಿನೊಳಗಿಂದಲೆ ಮತ್ತೊಂದು ಪ್ರಶ್ನೆಕ್ಕೆ ಅವಕಾಶಕೊಡಬೇಕಾದುದ್ದು ತಾತ್ವಿಕ ದೃಷ್ಟಿಯಿಂದ ಉಚಿತವಿದ್ದಿತೆಂದು ಹಮ್ಮು ಅಭಿಪ್ರಾಯವಾಗಿದೆ [ಹಿಂದಿನ ಪುಟ ನೋಡಿ]

ರೆಡ್ಡಿಯವರ ಮಂತ್ರಿಮಂಡಲವು ಜನಾಸಂತಾಗವನ್ನು ಕಳೆದುಕೊಳ್ಳಲಾರಂಭಿಸಿದೆ ಎಂಥಾದರೂ ಹೇಗಾದರೂ ಮಂತ್ರಿಮಂಡಲದ ಬದಲಾವಣೆಯಾಗುವದು ಅವಶ್ಯವೆಂಬ ಅಭಿಪ್ರಾಯಕ್ಕೆ ಮೈಸೂರಿನ ಎಲ್ಲ ರಾಜಕೀಯ ವರ್ಗಗಳಲ್ಲೂ ಪ್ರಷ್ಟಿ ದೊರೆಯಲಾರಂಭಿಸಿದೆ ಸಿದ್ಧಲಿಂಗಯ್ಯನವರು ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟುದರಿಂದ ಹನುಮಂತಯ್ಯನವರ ಪಕ್ಷಕ್ಕೆ ಹೆಚ್ಚು ಬಲ ಬಂದಂತಾಗಿದೆ ಎಂಬೀ ವಾತಾವರಣವು ಈಗ ತಲೆದೋರುತ್ತಿದೆ ಎಂಬುದು ಅಲ್ಲಿನ ರಾಜಕೀಯ ನಿರೀಕ್ಷಕರ ಊಹೆಯಾಗಿದೆ

ಹೀಗೆ ಮೈಸೂರಿನ ರಾಜಕೀಯ ಕ್ಷೇತ್ರದಲ್ಲಿ ಕುಳಿರ್ ಗಾಳಿಯು ಬೀಸಲಾರಂಭಿಸಿದೆ ಇದು ಒಳ್ಳೆಯದಕ್ಕೊ ಅಥವಾ ವಿತ್ತಷ್ಟು ಕಲಿಸು ನೋಲೋಗದಕ್ಕೋ ಈಗಲೇ ಹೇಳುವಂತಿಲ್ಲ. ಪರಿವರ್ತನೆ ಸಂಭವನೀಯವೆಂದು ಹೇಳಬಹುದು. ಪರಿವರ್ತನ ಆಗುವುದಾದರೆ, ಕರ್ನಾಟಕ ಏಕೀಕರಣ ಬಗೆಗೆ ಅನುಕೂಲ ವಾತಾವರಣ ಉದಿಸುವುದೆಂದು ಅಲ್ಲಿನ ಕಾರ್ಯಕರ್ತರೊಬ್ಬರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನಿಜವಾಗಲಿ ಎಂದು ನಾವು ಆಶಿಸುತ್ತೇವೆ.

ಮೈಸೂರಿನ ಯಾವ ಮೇಷದ ಮುಹೂರ್ತದಲ್ಲಿ ಇದುವರೆಗೆ ಆಗಿರುವ ಅನಿಷ್ಟವೇ ಸಾಕಾಗಿದೆ ಏಕೀಕರಣವು ಬೇಕು ಬೇಕು ಎಂದು ಬಾಯಿಂದ ಅನ್ನುತ್ತಲೇ ಕೈಯಿಂದ ಅದನ್ನು ದೂರದೂರ ತಿರುವ ವರ್ತನೆಯು ಬಹಳ ಕಾಲದವರೆಗೆ ನಡೆದಿದೆಯೆಂಬುದನ್ನು ಕಾಲವೇ ಕೂಗಿ ಹೇಳುತ್ತಿದೆ ಹಿಡುವುವರನ್ನು ಹಿಂದಕ್ಕೆ ಜಗ್ಗುವ ಸಾಹಸವನ್ನು ಮೈಸೂರು ರಾಜಕಾರಣಿಗಳು ಬೇಗ ಬಿಟ್ಟಕೊಟ್ಟಷ್ಟೂ ಒಳ್ಳೆಯದು ಇಲ್ಲವಾದರೆ ಬೆನ್ನು ಹಿಂದೆ ಬೀಸುವ ಗಾಳಿ ಎದೆಗದುರಾಗಿ ಬೀಸುವ ಬಿರುಗಾಳಿಯಾಗುವುದೆಂಬುದನ್ನು ಈ ರಾಜಕಾರಣಿಗಳು ಸ್ಥಿತ್ಯಂತರದ ಸಮಯದಲ್ಲಿ ಹೇಳಲಿಚ್ಚಿಸುತ್ತೇವೆ [ನ ಯು]

ಉಡ್‌ಲ್ಯಾಂಡ್ಸ್ 26—1—51 ರಿಂದ

ಪ್ರಜಾರಾಜ್ಯ ಜನ್ಮೋತ್ಸವದ
— ಸಂತೋಷಾರ್ಥವಾಗಿ —
Rupaya
ರುಪಯ
ಶಶಿಕಲ, ಮಾಡೆಲ್ಲ್, ಓಂಪ್ರಕಾಶ್
ನಾಜ್-ಅನ್ವರಿಬಾಯ್ ನಟಿಸಿರುವ
ಸಂಗೀತ, ನೃತ್ಯ, ವಿನೋದಗಳಿಂದ
ತುಂಬಿತುಳುಕುವ ಅಪೂರ್ವ ಹಿಂದಿ ಚಿತ್ರ
ಪ್ರತಿದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ — 26—1—51 ರಿಂದ 3 ದಿವಸಗಳು
ತ್ರಿಲೋಕ ಕಾಪೂರ್, ಮಜರ್‌ಖಾನ್, ಡೇವಿಡ್ ಅಭಿನಯಿಸಿರುವ
ಸೊಬಗಿನ ಹಿಂದಿ ಚಿತ್ರ — ರಾಜರಾಣಿ

ಸತ್ಯವಾದಿ For Quality Printing
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು L. N. Press
ಪತ್ರಿಕೆಗಳಿಗೆ ಅಂಚೆಯೆಚ್ಚು ಸೇರಿ 12 ಆಣೆ Sivarampet, Mysore

ರಣಜಿತ್ 26—1—51 ರಿಂದ

ನಿಮ್ಮಿ, ಕುಲದೀಪ್, ರಣಧೀರ್, ಳಕ್ಕೂ, ಅಮರನಾಥ್ ಪಾತ್ರವಹಿಸಿರುವ
ಮನಮೋಹನ ಹಿಂದೀ ಚಿತ್ರ
ಜಲ್ತೆದೀಪ್ Jaltedeep
ಪ್ರತಿ ದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ — 26—1—51 ರಿಂದ — 3 ದಿನಗಳು
ಸೂರ್ಯಕುಮಾರ್ ಪಾತ್ರವಹಿಸಿರುವ ಸುಂದರ ಹಿಂದಿ ಚಿತ್ರ — ನಾಟಿಕ್

ಬ್ರಿಟಿಷ್ ಪ್ರಧಾನಿ ಅಟ್ಲಿ ಮತ್ತು ಅವರ ಧರ್ಮಪತ್ನಿ ಟ್ರೂಮನ್

'ಗೋರಕ್ಷಣ'

ತಿಂಗಳಿಗೊಂದಾವರ್ತಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ ಪಾಲನೆದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು.

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ, ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

Edited, Printed and Published by M. S. Krishna Rao. at the Satyavadi Press Chamrajpuram Mysore